# ನ್ಯಾಷನಲ್ ಪಬ್ಲಿಕ್ ಶಾಲೆ, ಕೆಂಗೇರಿ, ಬೆಂಗಳೂರು

## "ಕರ್ನಾಟಕ ರಾಜ್ಯೋತ್ಸವದ ಸಂಭ್ರಮಾಚರಣೆ"

"ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ, ಹಸಿ ಗೋಡೆಯ ಹರಳಿನಂತೆ ಹುಸಿ ಹೋಗದ ಕನ್ನಡ" ಎಂಬ ಚೆನ್ನವೀರ ಕಣವಿಯವರ ಮಾತಿನಂತೆ ನಮ್ಮ ಶಾಲೆಯಲ್ಲಿ ಈ ವರ್ಷ ಕರ್ನಾಟಕ ರಾಜ್ಯೋತ್ಸವವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು. ನವೆಂಬರ್ ಮೊದಲ ವಾರದಂದು ಪ್ರತಿದಿನವೂ ಕನ್ನಡದಲ್ಲಿ ಪ್ರಾರ್ಥನಾ ಸಭೆಯನ್ನು ನಡೆಸಿ, ಮಕ್ಕಳು ಕನ್ನಡದಲ್ಲೇ ಹಿತ ನುಡಿ, ಹೊಸ ಪದ, ವಾರ್ತೆಯನ್ನು ಅಚ್ಚುಕಟ್ಟಾಗಿ ಪ್ರಸ್ತುತ ಪಡಿಸಿದರು. ಪ್ರಾರ್ಥನಾ ಸಭೆಯಲ್ಲಿ ಮಕ್ಕಳು ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳ ವೇಷಭೂಷಣವನ್ನು ಧರಿಸುವ ಮೂಲಕ ಅವರ ಪರಿಚಯ ಮಾಡಿದರು ಹಾಗು ಕನ್ನಡ ನಾಡು ನುಡಿಯನ್ನು ಕುರಿತ ಕೆಲವು ಗೀತೆಗಳನ್ನು ಹಾಡಿದರು.

ನವೆಂಬರ್ ೧೧ ನೇ ತಾರೀಖಿನಂದು "ಸಾಹಿತ್ಯ ಸೌರಭ" ಎಂಬ ಶೀರ್ಷಿಕೆಯಲ್ಲಿ ಕಾರ್ಯಕ್ರಮವನ್ನು ಆಚರಿಸಲಾಯಿತು ಮಕ್ಕಳು ವಚನಗಳನ್ನು ವಾಚಿಸುವುದರೊಂದಿಗೆ, ಶಿಶುಗೀತೆ ಮತ್ತು ಭಾವಗೀತೆಯನ್ನು ಹಾಡಿ ರಂಜಿಸಿದರು. ಮಕ್ಕಳು ಜನಪದ ಸೊಗಡನ್ನು ಬಿಂಬಿಸುವ ಗೀತ ನಾಟಕವನ್ನು ತಮ್ಮ ನೈಜ ಅಭಿನಯದ ಮೂಲಕ ಪ್ರಸ್ತುತಪಡಿಸಿದರು. ಒಟ್ಟಾರೆಯಾಗಿ ಕಾರ್ಯಕ್ರಮವು ಯಶಸ್ವಿಯಾಗಿ ಮೂಡಿ ಬಂದಿತು.

